KATK010032612022

**<u>ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯದಲ್ಲಿ, ತುಮಕೂರು</u>**

**<u>ಸತ್ರ ಮೊಕದ್ದಮೆ.75/2022</u>**

ಪ್ರಾ.ಸಾ. : **4**

ದೋ.ಸಾ. : **4**

ದಿ.**11.02.2025**

ಹೆಸರು : ಹನುಮಂತರಾಯಪ್ಪ

ತಂದೆಯ ಹೆಸರು : ಸೀನಪ್ಪ

ವಯಸ್ಸು : **43** ವರ್ಷ

ಉದ್ಯೋಗ : ವ್ಯವಸಾಯ

ವಾಸಸ್ಥಳ : ಮಂಚಗೊಂಡನಹಳ್ಳಿ

ಸಾಕ್ಷಿಯನ್ನು ಕರೆಸಿ, ಸತ್ಯಪ್ರತಿಜ್ಞೆಯ ಪ್ರಮಾಣವಚನ ಬೋಧಿಸಲಾಯಿತು.

**<u>ಮುಖ್ಯ ವಿಚಾರಣೆ : ಮಾನ್ಯ ಸರ್ಕಾರಿ ಅಭಿಯೋಜಕರಿಂದ :</u>**

1. ವಸಂತರಾಮ ನನಗೆ ಗೊತ್ತು. ಅವರು ನಮ್ಮ ಜಮೀನಿನ ಹತ್ತಿರ ಇದ್ದಾರೆ. ನಮ್ಮ ಜಮೀನಿನ ಪಕ್ಕದಲ್ಲಿ ವಸಂತರಾಮನ ತೋಟ ಇದೆ. ನ್ಯಾಯಾಲಯದಲ್ಲಿರುವ ಆರೋಪಿತರು ಗೊತ್ತಿದೆ. ಆರೋಪಿತರು ಮತ್ತು ವಸಂತರಾಮನ ನಡುವೆ ಏನು ವ್ಯಾಜ್ಯ ಇದೆ ಮತ್ತು ಏನು ತಕರಾರು ಇದೆ ಎಂದು ನನಗೆ ಗೊತ್ತಿಲ್ಲ. ಆರೋಪಿತರು ಸೇರಿ ವಸಂತರಾಮನಿಗೆ ಹೊಡೆದಿದ್ದನ್ನು ನಾನು ನೋಡಿಲ್ಲ. ಅವರು ಬೈದಿದ್ದನ್ನು ನಾನು ನೋಡಿಲ್ಲ. ನಾನು ಪೋಲೀಸರ ಮುಂದೆ ಹೇಳಿಕೆಯನ್ನು ಕೊಟ್ಟಿಲ್ಲ. ಈಗ ನನಗೆ ತೋರಿಸಿದ ನೋಟೀಸಿನಲ್ಲಿ ನನ್ನ ಸಹಿ ಇದೆ. ಆ ನೋಟೀಸನ್ನು ನಿಶಾನೆ ಪಿ4 ಎಂದು, ನನ್ನ ಸಹಿಯನ್ನು ನಿಶಾನೆ ಪಿ4(ಎ) ಎಂದು ಗುರುತಿಸಲಾಯಿತು. ಇನ್ನೊಂದು ಮಹಜರಿನಲ್ಲಿ ನನ್ನ ಸಹಿ ಇದ್ದು ಆ ಮಹಜರನ್ನು ಈಗಾಗಲೇ ನಿಶಾನೆ ಪಿ3 ಎಂದು ಗುರುತಿಸಲಾಗಿದೆ. ನನ್ನ ಸಹಿಯನ್ನು ನಿಶಾನೆ ಪಿ3(ಸಿ) ಎಂದು ಗುರುತಿಸಲಾಯಿತು. ಆ ಸಹಿಯನ್ನು ನಾನು ಪೋಲೀಸ್ ಠಾಣೆಗೆ ಹೋಗಿದ್ದಾಗ ಮಾಡಿದ್ದೇನೆ. ಆ ಸಹಿಯನ್ನು ಕೋವಿಡ್ ಸಮಯದಲ್ಲಿ ಮಾಡಿದ್ದೇನೆ. ನಿಶಾನೆ ಪಿ3 ರಲ್ಲಿ ಏನು ಬರೆದುಕೊಂಡಿದ್ದಾರೆ ಎಂದು ನನಗೆ ಗೊತ್ತಿಲ್ಲ. ನಿಶಾನೆ ಪಿ1

ಮಹಜರಿನಲ್ಲಿ ನನ್ನ ಸಹಿ ಇದೆ. ನನ್ನ ಸಹಿಯನ್ನು ನಿಶಾನೆ ಪಿ1(ಸಿ) ಎಂದು ಗುರುತಿಸಲಾಯಿತು. ಆ ಸಹಿಯನ್ನು ಎಲ್ಲಿ ಮಾಡಿದ್ದೇನೆ ಎಂದು ಹೇಳಲಾಗುವುದಿಲ್ಲ. ನನಗೆ ಜ್ಞಾಪಕ ಶಕ್ತಿ ಇಲ್ಲ. ನನ್ನ ಸಮಕ್ಷಮ ಏನು ವಸ್ತುಗಳನ್ನು ಅಮಾನತ್ತುಪಡಿಸಿಕೊಂಡರು ಎಂದು ನನಗೆ ಹೇಳಲಾಗುವುದಿಲ್ಲ. ಅದರಲ್ಲಿ ಏನು ಬರೆದಿದ್ದಾರೆ ಎಂದು ನನಗೆ ಗೊತ್ತಿಲ್ಲ.

(ಈ ಸಾಕ್ಷಿಯು ಈ ಹಿಂದೆ ತನಿಖಾಧಿಕಾರಿಯವರ ಮುಂದೆ ನೀಡಿದ ಹೇಳಿಕೆಗೆ ಮತ್ತು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದರಿಂದ ಪ್ರತಿಕೂಲ ಪಕ್ಷಕಾರರು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅನುಮತಿ ನೀಡಬೇಕೆಂದು ಸರಕಾರಿ ಅಭಿಯೋಜಕರು ಭಿನ್ನವಿಸಿರುತ್ತಾರೆ. ಈ ಪ್ರಕರಣದ ಕಾಗದ ಪತ್ರಗಳನ್ನು ಪರಿಶೀಲಿಸಿದಾಗ ಈ ಸಾಕ್ಷಿಯು ತನ್ನ ಹಿಂದಿನ ಹೇಳಿಕೆಗೆ ಮತ್ತು ಮಹಜರಿಗೆ ವಿರೋಧಾತ್ಮಕವಾಗಿ ಸಾಕ್ಷ್ಯ ನುಡಿದಿರುವುದು ಕಂಡುಬರುತ್ತದೆ. ಆದ್ದರಿಂದ ಪ್ರತಿಕೂಲ ಪಕ್ಷಕಾರನು ತನ್ನ ಪಾಟೀ ಸವಾಲಿನಲ್ಲಿ ಕೇಳಬಹುದಾದ ಪ್ರಶ್ನೆಗಳನ್ನು ಈ ಸಾಕ್ಷಿಗೆ ಕೇಳಲು ಅಭಿಯೋಜನೆಗೆ ಅನುಮತಿ ನೀಡುವುದು ಸೂಕ್ತ ಮತ್ತು ನ್ಯಾಯೋಚಿತ ಎಂದು ಮನಗೊಂಡು ಅನುಮತಿ ನೀಡಲಾಯಿತು).

**ಪಾಟೀ ಸವಾಲು ಮಾನ್ಯ ಸರ್ಕಾರಿ ಅಭಿಯೋಜಕರಿಂದ :**

2. ನಮ್ಮ ಜಮೀನಿನ ಪಕ್ಕದಲ್ಲಿ ಬಸವರಾಜುರವರ ಮಂಚಗೊಂಡನಹಳ್ಳಿ ಗ್ರಾಮದ ಸ ನಂ 32/2 ಬಿ ಯಲ್ಲಿ 36 ಗುಂಟೆ ಪಿತ್ರಾರ್ಜಿತ ಆಸ್ತಿ ಇದೆ ಎಂದರೆ ನನಗೆ ಗೊತ್ತಿಲ್ಲ. ದಿ.24.05.2019 ರಂದು ಬೆಳಿಗ್ಗೆ 10.30 ಗಂಟೆ ಸಮಯದಲ್ಲಿ ನಾನು ಜಮೀನಿನಲ್ಲಿ ಕೆಲಸ ಮಾಡುತ್ತಿರುವಾಗ ಬಸವರಾಜುರವರ ಮಗ ವಸಂತರಾಮ ತನ್ನ ದ್ವಿಚಕ್ರ ವಾಹನದಲ್ಲಿ ಜಮೀನಿನ ಕಡೆಯಿಂದ ವಾಪಸ್ ಮನೆಗೆ ಬರುತ್ತಿರುವಾಗ ಅವರ ಜಮೀನಿನ ಉತ್ತರ ದಿಕ್ಕಿನ ಅಂಚಿನ ರಸ್ತೆಯಲ್ಲಿ ಅವರ ಚಿಕ್ಕಪ್ಪ ರಾಮಚಂದ್ರಯ್ಯ, ಚಿಕ್ಕಮ್ಮ ಲಕ್ಷ್ಮಮ್ಮ, ಚಿಕ್ಕಪ್ಪನ ಮಕ್ಕಳಾದ ಜಯರಾಮ, ಮಂಜುನಾಥ ರವರು ರಸ್ತೆಗೆ ಬಂದು ವಸಂತರಾಮನನ್ನು ಅಡ್ಡಗಟ್ಟಿ ನಿಲ್ಲಿಸಿ, ನೀನು ಈ ರಸ್ತೆಯಲ್ಲಿ ಓಡಾಡಬಾರದು, ನಿನಗೆ ಈ ರಸ್ತೆಯಲ್ಲಿ ಯಾವುದೇ ಹಕ್ಕು ಇರುವುದಿಲ್ಲ ಎಂದು ಜಗಳ ತೆಗೆದು, ರಾಮಚಂದ್ರಯ್ಯ ದೊಣ್ಣೆಯಿಂದ ವಸಂತರಾಮನ ಬಲಭುಜಕ್ಕೆ ಬಲವಾಗಿ ಹೊಡೆದು, ಮಂಜುನಾಥ ಕಬ್ಬಿಣದ ರಾಡಿನಿಂದ ವಸಂತರಾಮನ ಬಲಭುಜಕ್ಕೆ ಬಲವಾಗಿ ಹೊಡೆದು, ಲಕ್ಷ್ಮಮ್ಮ ಮಚ್ಚಿನ ಹಿಂಬದಿಯಿಂದ ವಸಂತರಾಮನ ಮುಂಗೈಗೆ ಹೊಡೆದು, ವಸಂತರಾಮ ಕೆಳಗೆ ಬಿದ್ದು ನೋವು ತಾಳಲಾರದೆ ಹೊರಳಾಡುತ್ತಿದ್ದಾಗ ಜಯರಾಮ ಚಾಕುವಿನಿಂದ ಅವನ ಎಡಗೈ ಮೊಣಕೈಗೆ ಬಲವಾಗಿ ಚುಚ್ಚಿ ರಕ್ತಗಾಯಪಡಿಸಿ, ಮಂಜುನಾಥನು ಅವನನ್ನು ಕುರಿತು ನಿನ್ನನ್ನು ಇವತ್ತು ಉಳಿಸುವುದಿಲ್ಲ ಎಂದು ಕಬ್ಬಿಣದ ರಾಡಿನಿಂದ ಅವನ ಸೊಂಟಕ್ಕೆ ಬಲವಾಗಿ ಹೊಡೆದು,

ರಾಮಚಂದ್ರಯ್ಯ ತನ್ನ ಬಲಗಾಲಿನಿಂದ ಅವನ ಬಲಎದೆಗೆ ಎರಡು ಬಾರಿ ಒದ್ದು, ಮಂಜುನಾಥನು ಕಾಲಿನಿಂದ ಬಲಎದೆಗೆ ಒದ್ದು, ಮುಷ್ಠಿಯಿಂದ ಬಲಎದೆಗೆ ಗುದ್ದಿದನು ಎಂದರೆ ಸರಿಯಲ್ಲ. ಲಕ್ಷ್ಮಮ್ಮ ವಸಂತರಾಮನನ್ನು ಕುರಿತು ನಿನ್ನನ್ನು ಇವತ್ತು ಜೀವಸಹಿತ ಉಳಿಸುವುದಿಲ್ಲ ಎಂದು ಕಾಲಿನಿಂದ ಗುಪ್ತಾಂಗದ ಮೇಲೆ 4-6 ಬಾರಿ ಬಲವಾಗಿ ಒದ್ದಿದ್ದಲ್ಲದೆ ಕೊಲೆ ಮಾಡುವ ಉದ್ದೇಶದಿಂದ ಆತನ ಜುಟ್ಟು ಹಿಡಿದುಕೊಂಡು ತಲೆಯನ್ನು ನೆಲಕ್ಕೆ ಅಪ್ಪಳಿಸಿ ಕುಡುಗೋಲಿನ ಹಿಂಬದಿಯಿಂದ ಅವನ ಬಲದವಡೆಗೆ ಹೊಡೆದು, ನಂತರ ಲಕ್ಷ್ಮಮ್ಮ ಪೊರಕೆಯಿಂದ ಅವನ ಮುಖಕ್ಕೆ ಹಲವಾರು ಬಾರಿ ಹೊಡೆದು, ನಿನ್ನನ್ನು ಕುಲದಿಂದ ಹೊರ ಹಾಕುತ್ತೇವೆಂದು ನಿಂದಿಸಿದಳು ಎಂದರೆ ಸರಿಯಲ್ಲ. ಎಲ್ಲರೂ ವಸಂತರಾಮನನ್ನು ಬಾಯಿಗೆ ಬಂದಂತೆ ಬೈಯ್ಯುತ್ತಿರುವಾಗ ಲಕ್ಷ್ಮಮ್ಮ ಖಾರದ ಪುಡಿಯನ್ನು ಮುಖಕ್ಕೆ ಎರಚಿದಳು, ಅಷ್ಟರಲ್ಲಿ ನಾವೆಲ್ಲಾ ಹೋಗಿ ಜಗಳ ಬಿಡಿಸಿದೆವು ಎಂದರೆ ಸರಿಯಲ್ಲ. ನಾನು ಈ ರೀತಿ ಪೋಲೀಸರ ಮುಂದೆ ಹೇಳಿಕೆ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೇನೆಂದು ಹೇಳುವ ಹೇಳಿಕೆಯನ್ನು ನಿಶಾನೆ ಪಿ5 ಎಂದು ಗುರುತಿಸಲಾಯಿತು.

3. ದಿ.26.06.2019 ರಂದು ಮಧ್ಯಾಹ್ನ 1.30 ರಿಂದ 2.30 ಗಂಟೆಯವರೆಗೆ ಮಾಚಗೊಂಡನಹಳ್ಳಿ ಸ ನಂ 32ಃ2ಬಿ ಯಲ್ಲಿ ಕೃತ್ಯ ನಡೆದ ಸ್ಥಳದಲ್ಲಿ ಫಿರ್ಯಾದಿ ತೋರಿಸಿದಂತೆ ಪೋಲೀಸರು ಮಹಜರ್ ಮಾಡಿ ಮಹಜರ್ ಮಾಡುವ ಕಾಲಕ್ಕೆ ಕೃತ್ಯಕ್ಕೆ ಉಪಯೋಗಿಸಿದ ವಸ್ತುಗಳು ದೊರಕದೆ ಫಿರ್ಯಾದಿ ಆ ವಸ್ತುಗಳನ್ನು ಮನೆಯಲ್ಲಿ ಇಟ್ಟಿದ್ದಾನೆ ಎಂದು ಹೇಳಿದ ಮೇರೆಗೆ ಮಹಜರಿಗೆ ನನ್ನ ಸಹಿ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ.

4. ದಿ.29.06.2019 ರಂದು ಮಧ್ಯಾಹ್ನ 2.45 ರಿಂದ 3.45 ಗಂಟೆಯವರೆಗೆ ಕ್ಯಾತ್ಸಂದ್ರ ಪೋಲೀಸ್ ಠಾಣೆಯಲ್ಲಿ ಫಿರ್ಯಾದಿ ವಸಂತರಾಮ ಕೃತ್ಯ ನಡೆದ ಸಮಯದಲ್ಲಿ ಉಪಯೋಗಿಸಿದ ಆಯುಧಗಳನ್ನು ಮನೆಯಲ್ಲಿ ಸಂಗ್ರಹಿಸಿ ಇಟ್ಟಿದ್ದು ಅವುಗಳನ್ನು ತಂದು ಹಾಜರುಪಡಿಸಿದ ಮೇರೆಗೆ ಪೋಲೀಸರು ದೊಣ್ಣೆ, ಕಬ್ಬಿಣದ ರಾಡು, ಮಚ್ಚು, ಕುಡುಗೋಲು, ಕಬ್ಬಿಣದ ಚಾಕು, ಪೊರಕೆ, ರಕ್ತದ ಕಲೆಯಾಗಿದ್ದ ಶರ್ಟ್, ಖಾರದ ಪುಡಿಯನ್ನು ಅಮಾನತ್ತುಪಡಿಸಿಕೊಂಡು ಮಹಜರ್ ಮಾಡಿ ಅದನ್ನು ಓದಿ ಹೇಳಿ ನನ್ನ ಸಹಿ ತೆಗೆದುಕೊಂಡಿದ್ದಾರೆ ಎಂದರೆ ಸರಿಯಲ್ಲ. ನಾನು ಮತ್ತು ರಾಮಚಂದ್ರಯ್ಯ ತಿಗಳ ಜನಾಂಗದವರು. ರಾಮಚಂದ್ರಯ್ಯ ತಿಗಳ ಜನಾಂಗದ ಲೀಡರ್ ಎಂದರೆ ನಿಜ. ನಮ್ಮ

ಜನಾಂಗದ ಲೀಡರ್ ನ ಮಾತು ಕೇಳದೇ ಇದ್ದರೆ ಜನಾಂಗದಿಂದ ಬಹಿಷ್ಕರಿಸುತ್ತಾರೆ ಎಂದರೆ ನಿಜ. ಅವರು ಲೀಡರ್ ಆಗಿದ್ದರಿಂದ ಅವರ ಮಾತು ಕೇಳದೇ ಇದ್ದರೆ ನನ್ನನ್ನು ಬಹಿಷ್ಕರಿಸುತ್ತಾರೆ ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ಪಾರ್ಶ್ವವಾಯು ಆಗಿದ್ದರಿಂದ ನನಗೆ ಮರೆತುಹೋಗಿದೆ. ನನ್ನ ಎಡಗಡೆ ಪಾರ್ಶ್ವವಾಯು ಆಗಿದೆ. ಆದ್ದರಿಂದ ಎಲ್ಲಾ ವಿಚಾರಗಳು ಮರೆತುಹೋಗುತ್ತವೆ ಎಂದರೆ ನಿಜ. ಮರೆತುಹೋಗಿದ್ದರಿಂದ ಈ ಗಲಾಟೆಯಾಗಿಲ್ಲ ಆರೋಪಿತರಿಗೆ ಸಹಾಯ ಮಾಡಲು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು ಶ್ರೀ.ಎಸ್.ಪುಟ್ಟರಾಜಣ್ಣ ವಕೀಲರಿಂದ ಆರೋಪಿತರ ಪರವಾಗಿ :**

ಇಲ್ಲ

**(**ಉಕ್ತಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚುಗಾರರಿಂದ ಬೆರಳಚ್ಚು ಮಾಡಲ್ಪಟ್ಟಿತು**).**

ಓದಿ ಹೇಳಿ ಕೇ ಸರಿ ಇದೆ ಎಂದು ಒಪ್ಪಿದ್ದಾರೆ.

ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು